**ಬ್ರಿಟಿಷರ ಕಾಲದಲ್ಲಿ ಬಿಳಿಯ ಅಧಿಕಾರಿಗಳಿಗೆ ಭಾರತೀಯ ಸೇವಕರು ಗಾಳಿಬೀಸಲು ಎಳೆಯುತ್ತಿದ್ದ ಬೀಸಣಿಗೆ ಯಂತ್ರ.**

ನಾನು ಬರೋಡಾದ ಸಯ್ಯಾಜಿರಾವ್ ಯುನಿವರ್ಸಿಟಿಯಲ್ಲಿ 'ಮ್ಯೂಸಿಯಾಲಜಿ' ಕಲಿತೆ. ಮ್ಯೂಸಿಯಂಗಳಲ್ಲಿ ವಸಾಹತುಶಾಹಿ ಕಾಲಘಟ್ಟದ ಸಾವಿರಾರು ವಸ್ತುಗಳಿವೆ. ಅವು ಇಡೀ ವಸಾಹತುಶಾಹಿ ಚರಿತ್ರೆಯನ್ನು ತೆರೆದಿಡ್ತವೆ. ಒಂದು ಸಣ್ಣ ಪಂಖ ಆ ಕಾಲದ ಎಲ್ಲಾ ಕಥೆಗಳನ್ನ ಹೇಳ್ತದೆ. 'ಪಂಖಾವಾಲಾ' ಪದವನ್ನು ಇಂಗ್ಲಿಷ್ ನಿಘಂಟಿನಲ್ಲೂ ಸೇರಿಸಿದರು. ಆ ಆಬ್ಜೆಕ್ಟ್ ಇಟ್‌ಸೆಲ್ಫ್ ಈಸ್ ಪವರ್‌ಫುಲ್. ಯಾಕಂದರೆ ಆ ಆಬ್ಜೆಕ್ಟಲ್ಲಿ ಲೋಡೆಡ್ ಥಾಟ್ಸ್ ಇರ್ತದೆ. ಇದು ಬೇಸಿಕಲಿ ಕಲಾಕೃತಿ ರಚನೆಗೆ ಬಿಗಿನಿಂಗ್. ಇದಕ್ಕೆ 'ಎಟಿಎಮ್' (ಆಂಗರ್ ಥೆರಪಿ ಮಶಿನ್) ಅಂತ ಕರೆದೆ. ನಮಗೆ ವಸಾಹತುಶಾಹಿ ಚರಿತ್ರೆಯ ಮೇಲೆ ಸಿಟ್ಟಿದೆ. ಆ ಸಿಟ್ಟು ಶಮನಗೊಳ್ಳಬೇಕು ಅಂತಂದ್ರೆ ಆ ಯಂತ್ರ ಬೇಕು. ಅದನ್ನೊಮ್ಮೆ ನೋಡಿ, ಚರಿತ್ರೆಯನ್ನು ಅರ್ಥಮಾಡಿಕೊಂಡು ಮುಂದಕ್ಕೆ ಹೋಗಬೇಕು. ನಮ್ಮ ಸಮಸ್ಯೆ ಏನಂತಂದ್ರೆ, ಅದನ್ನು ನೋಡಿ ಆಕ್ರೋಶ ಮಾಡಿಕೊಂಡು ಅದೇ ಗುಂಗಿನಲ್ಲಿ ಇರ್ತೇವೆ. ಈ ಆಕ್ರೋಶ ಅನ್ನುವಂಥದ್ದು ದೀರ್ಘಕಾಲಕ್ಕೆ ಹೋದ್ರೆ ಒಳ್ಳೆಯದಲ್ಲ ಅಂತ ಅನ್ನಿಸ್ತದೆ.

◆ **ನಿಮ್ಮ ಕಲಾಕೃತಿಗಳು ಚರಿತ್ರೆಯ ಜೊತೆ ಎರಡು ಬಗೆಯ ಅನುಸಂಧಾನ ಮಾಡ್ತಿವೆ. ಒಂದು – ಬ್ರಿಟಿಷರ ಕಾಲದ ಪಂಖ ಮರುಸೃಷ್ಟಿ ಮಾಡೋದು. ಎರಡು – ಯಾರೋ ದಿನನಿತ್ಯ ಸಹಜವಾಗಿ ನಡೀತಿರೋ ಸಾಮಾನ್ಯ ಘಟನೆಗಳನ್ನು ನಿಮ್ಮದೇ ಕೋನದಲ್ಲಿ ಸೆರೆ ಹಿಡಿದು ಕಲಾಕೃತಿಯಾಗಿ ರೂಪಾಂತರ ಮಾಡೋದು.**

'ಇಂಟರ್‌ಫಿಯರೆನ್ಸ್' ಕೃತಿಯಲ್ಲಿ ರತ್ನಗಂಬಳಿಯ ದೂಳು ಝಾಡಿಸುವ ಕೆಲಸ ತನಗೆ ತಾನೇ ನಡೀತಾಯಿದೆ. ಅಲ್ಲಿ ನ್ಯಾಚುರಲ್ ಆಗಿ ನಡಿತಾ ಇರುವ ಪ್ರಕ್ರಿಯೆಯನ್ನು ಶೂಟ್ ಮಾಡಿ ಅದನ್ನು ಆರ್ಟ್ ಸ್ಪೇಸಿಗೆ ತೆಕ್ಕೊಂಡು ಬಂದಿದ್ದೇನೆ. ಅಲ್ಲಿರೋದು ಹಿಸ್ಟಾರಿಕಲ್ ಡಸ್ಟ್. 70–80 ವರ್ಷಗಳ ಹಿಂದಿನ ಆ ಕಾರ್ಪೆಟ್ಟಿನ ಮೇಲೆ ರಾಜ ಮಹಾರಾಜರು, ಮಂತ್ರಿಗಳು, ಅಧಿಕಾರಿಗಳು ನಡ್ಕೊಂಡ್ ಹೋಗಿದ್ದಾರೆ. ಅವರೆಲ್ಲರ ಕಾಲದೂಳು ಅದರ ಮೇಲಿದೆ. ಅದನ್ನ ಮ್ಯೂಸಿಯಂನ ನೌಕರರು ಹೊಡ್ದು ತೆಗೀತಿದ್ದಾರೆ. ಆ ದೂಳಿನಲ್ಲಿರೊ ಡಿಎನ್‌ಎ ಚೆಕ್ ಮಾಡಿದ್ರೆ ಚರಿತ್ರೆಯ ಎಲ್ಲ ಕ್ಯಾರಕ್ಟರುಗಳನ್ನು ಐಡೆಂಟಿಫೈ ಮಾಡಬಹುದೊ ಏನೊ.

◆ **ಯಾವ ಮ್ಯೂಸಿಯಮ್ ಅದು?**

ಜುನಾಘಡ್. ಆ ಕಾರ್ಪೆಟ್ ತಯಾರಾದದ್ದು ಬ್ರಿಟಿಷರ ಕಾಲದಲ್ಲಿ. ಅದರ ಮೇಲೆ ಬರೆದಿದೆ, 'ಜುನಾಘಡ್ ಜೈಲ್' ಅಂತ. ಬ್ರಿಟಿಷರು ಜೈಲ್‌ನಲ್ಲಿ ಕೈದಿಗಳ ಪುನರ್ವಸತಿ ಕಾರ್ಯಕ್ರಮದ ಭಾಗವಾಗಿ



ಎಲ್.ಎನ್. ತಲ್ಲೂರ್ ಜೊತೆ ರಹಮತ್ ತರೀಕೆರೆ

ಕಾರ್ಪೆಟ್ ತಯಾರ್ ಮಾಡ್ತಾಯಿದ್ರು. ಈ ಕಾರ್ಪೆಟನ್ನು ಲೋಕಲ್ ಮಹಾರಾಜರಿಗೆ ಕೊಡುಗೆಯಾಗಿ ಕೊಡ್ತಿದ್ರು. ಅದನ್ನು ಮಹಾರಾಜರು ದರ್ಬಾರ್ ಹಾಲಲ್ಲಿ ಉಪಯೋಗಿಸ್ತಿದ್ರು. ಮ್ಯೂಸಿಯಂನವರು ಅದನ್ನು ದರ್ಬಾರ್ ಹಾಲ್‌ನಿಂದ ತರುವಾಗ ಕ್ಲೀನ್ ಮಾಡ್ತಾಯಿದ್ರು. ಆ ಸಮಯದಲ್ಲಿ ಜುನಾಗಢ್‌ಗೆ ಭೇಟಿ ಕೊಟ್ಟಿದ್ದ ನಾನು ಹೇಳಿದೆ: 'ನನಗಿದನ್ನ ಫಿಲ್ಮ್ ಮಾಡ್ಬೇಕು. ನೀವು ನಿಮ್ಮ ಕೆಲಸ ಮಾಡಿ. ನಾನು ಜಸ್ಟ್ ಫಿಲ್ಮ್ ಕ್ಯಾಮೆರಾ ಅಲ್ಲಿ ಇಟ್ಟಿರ್ತೇನೆ'. ಆಗ ಒಂದಂತೂ ಸ್ಪಷ್ಟವಾಗಿ ಗೊತ್ತಿತ್ತು. ಈ ಸನ್ನಿವೇಶವನ್ನು ಈ ಮಾಧ್ಯಮದಲ್ಲಿ ಮಾತ್ರ ಹೇಳಲಿಕ್ಕೆ ಸಾಧ್ಯ ಅಂತ.